ಕೆಲವರನ್ನು 'ಮ್ಯಾಜಿಕಲ್' ಎಂದು ಬೇರೆ ಬೇರೆ ಕಾರಣಕ್ಕೆ ಕರೆಯುವುದನ್ನು ನೋಡಿದ್ದೇವೆ. ಕ್ರಿಕೆಟ್‌ನಲ್ಲೂ ಅಂತಹ ಮಾಯಾಸದೃಶ ಪ್ರತಿಭೆಗಳು ಆಗೀಗ ಹೊಳೆಯುತ್ತಿರುತ್ತಾರೆ. ನ್ಯೂಜಿಲೆಂಡ್‌ನ ಪರವಾಗಿ ಆಡಿದ ಎಜಾಜ್ ಪಟೇಲ್ ಕೂಡ ಅಂತಹ 'ತಾರೆ'.

ಮುಂಬೈನಲ್ಲಿ ಮುಸ್ಲಿಂ ಕುಟುಂಬದಲ್ಲಿ ಹುಟ್ಟಿದವರು ಎಜಾಜ್. ರೆಫ್ರಿಜರೇಟರ್ ಮೆಕ್ಯಾನಿಕ್ ಆಗಿದ್ದ ಅವರ ತಂದೆ ನ್ಯೂಜಿಲೆಂಡ್‌ಗೆ ವಲಸೆ ಹೊರಟಾಗ ಎಜಾಜ್ ಇನ್ನೂ ಎಂಟರ ಬಾಲಕ. ಸಾವಿರಾರು ಮುಸ್ಲಿಮರನ್ನು ಆ ದೇಶದಲ್ಲಿ ಇರುವಿಗಾಗಿ ಸಂಘಟಿಸುತ್ತಾ, ತಮ್ಮತನ–ಆಚರಣೆಯನ್ನು ಉಳಿಸಿಕೊಂಡೂ ಅನ್ಯ ನೆಲಕ್ಕೆ ಒಗ್ಗಿಕೊಂಡ ಮನಸ್ಸುಗಳನ್ನು ಕಂಡ ಬಾಲಕ ಎಜಾಜ್.

ಭಾರತದ ಎದುರು ತಾವು ಹುಟ್ಟಿದ್ದ ಮುಂಬೈನಲ್ಲಿಯೇ ನಡೆದ ಎರಡನೇ ಕ್ರಿಕೆಟ್ ಟೆಸ್ಟ್ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಹತ್ತೂ ವಿಕೆಟ್‌ಗಳನ್ನು ಬುಟ್ಟಿಗೆ ಹಾಕಿಕೊಂಡು ಹೊಳೆದರು. 'ತಾರಾಬಲಗಳೆಲ್ಲ ಹೀಗೆ ಒಲಿದುಬಂದರೆ ಇಂಥವೆಲ್ಲ ಆಗುತ್ತವೆ' ಎಂಬ ಅವರ ಪ್ರತಿಕ್ರಿಯೆಯಲ್ಲಿ ದೈವದ ನಂಬುಗೆ, ಕೌಶಲದ ಬಗೆಗಿನ ಆತ್ಮವಿಶ್ವಾಸ ಎರಡನ್ನೂ ಕಾಣಬಹುದು.

ಏನೋ ಆಗಲು ಹೊರಟು, ಮತ್ತಿನ್ನೇನೋ ಆಗುವವರು ವಿಶೇಷವಾದ ಸಾಧನೆ ಮಾಡಿರುವುದಕ್ಕೆ ಅನೇಕ ಉದಾಹರಣೆಗಳಿವೆ. ಕ್ರಿಕೆಟ್ ಆಡಲು ಹೊರಟು ಆಮೇಲೆ ವೇಗದ ಓಟಗಾರ ಆದ ಉಸೇನ್ ಬೋಲ್ಟ್, ಆರಂಭಿಕ ಬ್ಯಾಟ್ಸ್‌ಮನ್ ಆಗಿ ಮಿಂಚುತ್ತಿದ್ದಾಗಲೇ ಸ್ಪಿನ್ನರ್ ಆಗಲು ನಿರ್ಧರಿಸಿದ ರವಿಚಂದ್ರನ್ ಅಶ್ವಿನ್ ಅಂಥವರ ಸಾಲಿನವರು. ಎಜಾಜ್ ಕೂಡ ವೇಗದ ಬೌಲರ್ ಆಗಲು ಹೊರಟಿದ್ದರು. 19ರ ಹರೆಯದವರೆಗೂ ಅವರು ಎಡಗೈ ವೇಗದ ಬೌಲರ್ ಆಗಿಯೇ ಕ್ರಿಕೆಟ್ ಪಾಠಗಳನ್ನು ಕಲಿತದ್ದು. ಐದಡಿ ಆರು ಇಂಚಷ್ಟೇ ಎತ್ತರವಿದ್ದ ಅವರಿಗೆ ನ್ಯೂಜಿಲೆಂಡ್‌ನ ನೀಳಕಾಯದ ವೇಗಿಗಳನ್ನು ಮೀರಿ ಹೆಚ್ಚಿನ ಸಾಧನೆಯನ್ನು ಮಾಡಲು ಸಾಧ್ಯವಿಲ್ಲವೇನೋ ಅನ್ನಿಸಿತು. ಅದಕ್ಕೇ ಸ್ಪಿನ್ನರ್ ಆಗಲು ನಿರ್ಧರಿಸಿದರು. 2015ರಿಂದ ಪ್ರಥಮ ದರ್ಜೆ ಕ್ರಿಕೆಟ್ ಆಡತೊಡಗಿದ ಮೇಲೆ ಕೆಲವನ್ನು ಬಲ್ಲವರಿಂದ ಕಲಿತರು. 1992ರ ವಿಶ್ವಕಪ್‌ನಲ್ಲಿ ಆರಂಭಿಕ ಸ್ಪಿನ್ನರ್ ಆಗಿ ನ್ಯೂಜಿಲೆಂಡ್ ಪರವಾಗಿ ಬೌಲಿಂಗ್ ಮಾಡಿ ಗಮನ ಸೆಳೆದಿದ್ದವರು ದೀಪಕ್ ಪಟೇಲ್. ಅವರೇ ಎಜಾಜ್ ತರಬೇತುದಾರ. ತಾವು ಆಡಿದ ಚೊಚ್ಚಿಲ ಟ್ವೆಂಟಿ20 ಅಂತರರಾಷ್ಟ್ರೀಯ ಕ್ರಿಕೆಟ್ ಪಂದ್ಯದಲ್ಲೂ ಪಾಕಿಸ್ತಾನದ ವಿರುದ್ಧ ಎಜಾಜ್ ಮೊದಲ ಓವರ್ ಬೌಲಿಂಗ್ ಮಾಡಿದ್ದು ಕಾಕತಾಳೀಯವಷ್ಟೆ. ಅದನ್ನು ಕಂಡು ದೀಪಕ್ ಪಟೇಲ್ ಕೂಡ ಖುಷಿಪಟ್ಟಿದ್ದರು.

2015–16ರ ಫೋರ್ಡ್ ಸರಣಿಯಲ್ಲಿ ನ್ಯೂಜಿಲೆಂಡ್ ದೇಸಿ ಕ್ರಿಕೆಟ್‌ನಲ್ಲಿ ಎಜಾಜ್ ಆಟ ಶುರುಮಾಡಿದ್ದು. ಅದೇ ಋತುವಿನ ಪ್ಲಂಕೆಟ್ ಶೀಲ್ಡ್ ಟೂರ್ನಿಯಲ್ಲಿ 43 ವಿಕೆಟ್‌ಗಳನ್ನು ಪಡೆದು, ಎಲ್ಲರಿಗಿಂತ ಅತಿ ಹೆಚ್ಚು ಬ್ಯಾಟ್ಸ್‌ಮನ್‌ಗಳನ್ನು ಔಟ್ ಮಾಡಿದ ಸಾಧನೆ ಬರೆದರು. ಮೂರು ಸತತ ಋತುಗಳಲ್ಲಿ ದೇಸಿ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ವಿಕೆಟ್‌ಗಳನ್ನು ಪಡೆದ ಬೌಲರ್ ಎನಿಸಿಕೊಳ್ಳುತ್ತಾ ಬಂದ ಎಜಾಜ್, ಅದಾಗಲೇ ಆಡುತ್ತಿದ್ದ ಸೋಧಿ ಅವರ ಅವಲಂಬನೆಯನ್ನು ತಂಡ ಯಾವಾಗ ಮೀರೀತೋ ಎಂದು ಕಾಯಲಾರಂಭಿಸಿದ್ದರು. 2018ರಲ್ಲಿ ಮನೆಮಂದಿಯೆಲ್ಲ ಪಂಕ್ತಿಯೂಟ ಮಾಡಲು ಅಣಿಯಾಗಿ, ಹರಟೆಯಲ್ಲಿ ನಿರತರಾಗಿದ್ದಾಗ ಪಾಕಿಸ್ತಾನದ ವಿರುದ್ಧದ ಟೆಸ್ಟ್ ಸರಣಿಗೆ ಇವರು ಆಯ್ಕೆಯಾದ ಸುದ್ದಿ ಹೊರಬಿತ್ತು. ಅದಕ್ಕೂ ಮೊದಲು ಟ್ವೆಂಟಿ20ಯಲ್ಲಿ ಆಡುವ ಅವಕಾಶ ಸಿಕ್ಕಿತ್ತು. ಏಕದಿನದ ಪಂದ್ಯಗಳ ತಂಡದಲ್ಲಿ ಇದ್ದರೂ ಆಡುವ ಹನ್ನೊಂದು ಮಂದಿಯಲ್ಲಿ ಒಬ್ಬರಾಗಿರಲಿಲ್ಲ. ಅದೇ ವರ್ಷ ನವೆಂಬರ್‌ನಲ್ಲಿ ಅಬು ಧಾಬಿಯಲ್ಲಿ ನಡೆದ ಟೆಸ್ಟ್ ಪಂದ್ಯದಲ್ಲಿ ನಾಯಕ ಕೇನ್ ವಿಲಿಯಮ್ಸನ್ ಈ ಬೌಲರ್ ಅನ್ನು ಅಚ್ಚರಿಯ ಅಸ್ತ್ರದಂತೆ ಬಳಸಲು ನಿರ್ಧರಿಸಿದರು.

ಪಾಕಿಸ್ತಾನದ ಬ್ಯಾಟ್ಸ್‌ಮನ್‌ಗಳು ಸ್ಪಿನ್ನರ್‌ಗಳನ್ನು ಎದುರಿಸುವಲ್ಲಿ ಪಳಗಿದವರಾದರೂ ಮೊದಲ ಇನಿಂಗ್ಸ್‌ನಲ್ಲಿ 24 ಓವರ್‌ಗಳನ್ನು ಈ ಎಡಗೈ ಸ್ಪಿನ್ನರ್ ಕೈಯಿಂದ ವಿಲಿಯಮ್ಸನ್ ಹಾಕಿಸಿದರು. ಎರಡು ವಿಕೆಟ್‌ಗಳೂ ಸಿಕ್ಕವು. ಮಜಾ ಇದ್ದದ್ದು ಎರಡನೇ ಇನಿಂಗ್ಸ್‌ನಲ್ಲಿ. ಪಾಕಿಸ್ತಾನಕ್ಕೆ ಗೆಲ್ಲಲು 176 ರನ್‌ಗಳು ಬೇಕಿದ್ದವು. 48 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡು ತಂಡ ಏದುಸಿರು ಬಿಡುತ್ತಿದ್ದಾಗ, ಅಜರ್ ಅಲಿ ಹಾಗೂ ಅಸಾದ್ ಷಫೀಕ್ 82 ರನ್‌ಗಳ ಜತೆಯಾಟ ಆಡಿ ಗೆಲುವಿನ ಆಸೆ ಚಿಗುರಿಸಿದರು. ಒಂದು ಕಡೆಯಿಂದ ಸೋಧಿ ಹಾಕಿದ ಒತ್ತಡದ ಲಾಭವನ್ನು ಇನ್ನೊಂದು ಕಡೆ ಎಜಾಜ್ ಪಡೆಯತೊಡಗಿದ್ದು 43 ಓವರ್‌ಗಳ ನಂತರ. 147 ರನ್‌ಗಳಿಗೆ 5 ವಿಕೆಟ್ ಕಳೆದುಕೊಂಡಿದ್ದ ಪಾಕಿಸ್ತಾನ, ಇನ್ನು 30 ರನ್‌ಗಳನ್ನು ಗಳಿಸುವ ಕುರಿತು ಹೆಚ್ಚಿನವರಿಗೆ ಅನುಮಾನಗಳಿರಲಿಲ್ಲ. ಯಾಕೆಂದರೆ ನೆಲೆ ನಿಂತಿದ್ದ ಅಜರ್ ಅಲಿ ಕುದುರಿಕೊಂಡು ಆಡುತ್ತಿದ್ದರು. ಆಗ ಎಜಾಜ್ 'ಮ್ಯಾಜಿಕ್ ಸ್ಪೆಲ್' ಕಾಣತೊಡಗಿತು. 44.6, 46.2, 50.6, 58.4 – ಇಂತಹ ಓವರ್‌ಗಳ ಘಟ್ಟಗಳಲ್ಲಿ ಎಜಾಜ್ ಅವರು ಸರ್ಫರಾಜ್, ಬಿಲಾಲ್ ಆಸಿಫ್, ಹಸನ್ ಅಲಿ ಹಾಗೂ ಕೊನೆಯದಾಗಿ ಅಜರ್ ಅಲಿ ಅವರನ್ನು ಔಟ್ ಮಾಡಿದರು. ಅಜರ್ ಎಲ್‌ಬಿಡಬ್ಲ್ಯು ಆದದ್ದನ್ನು ಅವರು ಬದುಕಿನಲ್ಲಿ ಮರೆಯಲಿಕ್ಕಿಲ್ಲ. ಯಾಕೆಂದರೆ, ಪಾಕಿಸ್ತಾನಕ್ಕೆ ಗೆಲ್ಲಲು ಆಗ ಬರೀ 4 ರನ್‌ಗಳು ಬೇಕಿದ್ದವು. ಎರಡನೇ ಇನಿಂಗ್ಸ್‌ನಲ್ಲಿ 5 ವಿಕೆಟ್‌ಗಳನ್ನು ಪಡೆದದ್ದೇ ಅಲ್ಲದೆ ಪಂದ್ಯ ಪುರುಷೋತ್ತಮ ಪ್ರಶಸ್ತಿಯೂ ಅವರಿಗೆ ಸಂದಿತು.

ಪಾಕಿಸ್ತಾನದಿಂದ ಅಂಥದೊಂದು ಗೆಲುವನ್ನು ಕಸಿದು ಕೊಟ್ಟ ಮೇಲೆ ಎಜಾಜ್ ಅಷ್ಟೇನೂ ಪ್ರಭಾವಿ ಎನಿಸಿರಲಿಲ್ಲ. 20 ಇನಿಂಗ್ಸ್‌ಗಳಿಂದ ಅವರು ಇದುವರೆಗೆ 43 ವಿಕೆಟ್‌ಗಳನ್ನು ಪಡೆದಿದ್ದಾರೆ. ಅವುಗಳಲ್ಲಿ 17 ಭಾರತದ ಬ್ಯಾಟ್ಸ್‌ಮನ್‌ಗಳದ್ದೇ. ಹತ್ತೂ ವಿಕೆಟ್‌ಗಳ ಒಂದು ದೊಡ್ಡ ಗೊಂಚಲನ್ನೂ ಸೇರಿಸಿ. ಪಾಕಿಸ್ತಾನದ ವಿರುದ್ಧ 13 ವಿಕೆಟ್‌ಗಳನ್ನು ಅವರು ಪಡೆದಿದ್ದಾರೆ.

ಟ್ವೆಂಟಿ20 ಕ್ರಿಕೆಟ್‌ನಲ್ಲಿ ಎಡಗೈ ಸ್ಪಿನ್ನರ್‌ಗಳ ವೈವಿಧ್ಯ ಎದುರಾಳಿಗಳನ್ನು ಕಂಗೆಡಿಸಿರುವ ಉದಾಹರಣೆಗಳಿವೆ. ಇದನ್ನು ನೋಡಿಯೇ ನ್ಯೂಜಿಲೆಂಡ್‌ನ ಆಯ್ಕೆದಾರ ಗೆವಿನ್ ಲಾರ್ಸನ್ ಎಜಾಜ್ ಅವರನ್ನು ಮೊದಲು ಹೆಕ್ಕಿದ್ದು. 30ನೇ ವಯಸ್ಸಿನಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್ ಆಡುವ ಅವಕಾಶ ದೊರೆತದ್ದನ್ನೂ 'ಮಾಯಾ ಅವಕಾಶ' ಎಂದೇ ಅನೇಕರು ಬಣ್ಣಿಸಿದ್ದಾರೆ. ಜಿಮ್ ಲೇಕರ್, ಅನಿಲ್ ಕುಂಬ್ಳೆ ಒಂದು ಇನಿಂಗ್ಸ್‌ನಲ್ಲಿ ಹತ್ತೂ ವಿಕೆಟ್‌ಗಳನ್ನು ಟೆಸ್ಟ್ ಕ್ರಿಕೆಟ್‌ನಲ್ಲಿ ಪಡೆದು ಬೀಗಿದ್ದರು. ಆ ಸಾಲಿಗೆ ಎಜಾಜ್ ಸೇರಿಕೊಂಡಿರುವುದಕ್ಕೆ ಅಡಿಗೆರೆ ಎಳೆಯಬೇಕು. ಭಾರತದ ಹತ್ತು ವಿಕೆಟ್‌ಗಳಲ್ಲಿ ಎರಡು ಕ್ಲೀನ್ ಬೌಲ್ಡ್, ಮೂರು ಎಲ್‌ಬಿಡಬ್ಲ್ಯು, ಎರಡು ಕಾಟ್ ಬಿಹೈಂಡ್ ದಿ ವಿಕೆಟ್. ಇದರರ್ಥ ಅವರ ಬೌಲಿಂಗ್‌ನ ವೈವಿಧ್ಯವೇ ಎದುರಾಳಿಗಳಿಗೆ ಸವಾಲೊಡ್ಡುತ್ತದೆ ಎನ್ನುವುದು. ಚೇತೇಶ್ವರ ಪೂಜಾರಾ ಬೌಲ್ಡ್ ಆಗಿದ್ದರೆ, ವಿರಾಟ್ ಕೊಹ್ಲಿ ಎಲ್‌ಬಿ ಬಲೆಗೆ ಬಿದ್ದಿದ್ದರು. 150 ರನ್ ಗಳಿಸಿದ್ದ ಮಯಾಂಕ್ ಅಗರ್‌ವಾಲ್ ಕಾಟ್ ಬಿಹೈಂಡ್ ಆದರು.

ಚೆಂಡನ್ನು ಫ್ಲೈಟ್ ಮಾಡಬಲ್ಲ, ಆಫ್‌ಬ್ರೇಕ್ ಹಾಕಿ ಕಂಗೆಡಿಸಬಲ್ಲ, ಡ್ರಿಫ್ಟಿಂಗ್ ಎಸೆತಗಳ ಮೂಲಕ ಎಲ್‌ಬಿ ಬಲೆಗೆ ಬೀಳಿಸಬಲ್ಲ ಎಜಾಜ್ ಮುಖದಲ್ಲಿ ಸ್ನಿಗ್ಧ ನಗುವಿದೆ. ಹತ್ತು ವಿಕೆಟ್ ಪಡೆದ ಮೇಲೆ ವೀರೇಂದ್ರ ಸೆಹ್ವಾಗ್ ಈ ಆಟಗಾರನನ್ನು ಹೊಗಳಿ ಟ್ವೀಟ್ ಮಾಡಿದರು. 2008ರಲ್ಲಿ ನೆಟ್ಸ್‌ನಲ್ಲಿ ಅಭ್ಯಾಸ ಮಾಡುವಾಗ ಇದೇ ಸೆಹ್ವಾಗ್ ತಮ್ಮ ಎಸೆತವನ್ನು ಕ್ರೀಡಾಂಗಣದ ಆಚೆಗೆ ಹೊಡೆದಿದ್ದನ್ನು ಆಗ ಎಜಾಜ್ ನೆನಪಿಸಿಕೊಂಡು ಮರುಟ್ವೀಟ್ ಮಾಡಿ ನಕ್ಕರು.

ನ್ಯೂಜಿಲೆಂಡ್ ತಂಡದ ಡಗ್‌ಔಟ್‌ಗೆ ಹೋಗಿ ವಿರಾಟ್ ಕೊಹ್ಲಿ, ಮುಂಬೈನಲ್ಲೇ ಹುಟ್ಟಿದ ಈ ಪ್ರತಿಭಾವಂತನಿಗೆ ಶುಭಕೋರಿ ಬಂದರು.

ಕ್ರಿಕೆಟ್‌ನಲ್ಲಿ ಇಂತಹ 'ಮಾಯಾ ತಾರೆ'ಗಳು ಹೊಳೆಯುತ್ತಿರಬೇಕು. ಭಾರತದ ಜನ್ಮಜಾತ ಪ್ರತಿಭೆಗಳನ್ನು ಬೇರೆ ದೇಶಗಳೂ ಹೆಕ್ಕಿ ಕಣ್ಕಕ್ಕಿಳಿಸುತ್ತಿರುವುದು ಕ್ರಿಕೆಟ್‌ನ ಸ್ವಾಗತಾರ್ಹ ಜಾಗತೀಕರಣವೂ ಹೌದು. ಇನ್ನೊಂದು ಸತ್ಯವೆಂದರೆ, ನ್ಯೂಜಿಲೆಂಡ್ ಪರವಾಗಿ ಆಡಿದ ಮೊದಲ ಮುಸ್ಲಿಂ ಆಟಗಾರ ಎಜಾಜ್!

ಪ್ರತಿಕ್ರಿಯಿಸಿ: **feedback@sudha.co.in**